# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 336 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 15/02/2024 |
| ಉತ್ತರಿಸುವ ಸಚಿವರು | : | ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸಲು ಸರ್ಕಾರ ಪ್ರವಾಸೋದ್ಯಮ ನೀತಿಯನ್ನು ರೂಪಿಸಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು. | ರೂಪಿಸಿದೆ.<br><br>ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸಲು ಕರ್ನಾಟಕ ಪ್ರವಾಸೋದ್ಯಮ ನೀತಿ - 2020-26 ಅನ್ನು ಜಾರಿಗೊಳಿಸಲಾಗಿದೆ.<br><br>ಈ ನೀತಿ ಅಡಿಯಲ್ಲಿ ಗುರುತಿಸಿರುವ ಆಧ್ಯತಾ ಪ್ರವಾಸಿ ತಾಣಗಳಲ್ಲಿ ಈ ಕೆಳಕಂಡ 26 ಪ್ರವಾಸಿ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಮುಂದೆ ಬರುವ ಖಾಸಗಿ ಬಂಡವಾಳ ಹೂಡಿಕೆದಾರರನ್ನು ಸೆಳೆಯಲು ಸಹಾಯಧನ, ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>1. ಸಾಹಸ ಪ್ರವಾಸೋದ್ಯಮ ಯೋಜನೆ<br>2. ಕೃಷಿ ಪ್ರವಾಸೋದ್ಯಮ ಯೋಜನೆ<br>3. ಮನರಂಜನಾ ಪಾರ್ಕ್<br>4. ಕ್ಯಾರವಾನ್ ಪಾರ್ಕ್ ಯೋಜನೆ<br>5. ಕ್ಯಾರವಾನ್ ಪ್ರವಾಸೋದ್ಯಮ ಯೋಜನೆ<br>6. ಸಮಾವೇಶ ಕೇಂದ್ರ<br>7. ಸಾಂಸ್ಕೃತಿಕ ಪ್ರವಾಸೋದ್ಯಮ ಯೋಜನೆ<br>8. ಸಾಂಸ್ಕೃತಿಕ ಗ್ರಾಮ<br>9. ಪರಿಸರ ಪ್ರವಾಸೋದ್ಯಮ ಯೋಜನೆ<br>10. ಪಾರಂಪರಿಕ ಹೋಟೆಲ್<br>11. ಪಾರಂಪರಿಕ ಪ್ರವಾಸೋದ್ಯಮ ಯೋಜನೆ<br>12. ಪಾರಂಪರಿಕ ನಡಿಗೆ<br>13. ಹೋಂಸ್ಟೇ<br>14. ಹೋಟೆಲ್ ಯೋಜನೆ (ಬಜೆಟ್)<br>15. ಹೋಟೆಲ್ ಯೋಜನೆ (ಪ್ರೀಮಿಯಂ)<br>16. ಹೌಸ್‌ಬೋಟ್ ಯೋಜನೆ<br>17. ವಸ್ತು ಸಂಗ್ರಹಾಲಯಗಳು ಮತ್ತು ಗ್ಯಾಲರಿಗಳು<br>18. ರೋಪ್ ವೇ<br>19. ಪ್ರಮುಖ ಪ್ರೋತ್ಸಾಹಕ ಮತ್ತು ಆದ್ಯತಾ ಕ್ರಮಗಳು ಸುರಕ್ಷತೆ ಮತ್ತು ನೈರ್ಮಲ್ಯ ಪ್ರವಾಸೋದ್ಯಮ ಯೋಜನೆ<br>20. ಧ್ವನಿ ಮತ್ತು ಬೆಳಕಿನ ದರ್ಶನ<br>21. ಟೆಂಟ್ ವಸತಿ ಸೌಕರ್ಯ<br>22. ಥೀಮ್ ಪಾರ್ಕ್<br>23. ಪ್ರವಾಸಿ ವಿವರಣಾ ಕೇಂದ್ರ<br>24. ಪ್ರವಾಸಿ ಲಕ್ಸುರಿ ಕೋಚ್<br>25. ಸ್ವಾಸ್ಥ್ಯ ಕೇಂದ್ರ<br>26. ರಸ್ತೆ ಬದಿ ಸೌಲಭ್ಯಗಳು. |

| | | |
|---|---|---|
| ಆ) | ರಾಜ್ಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸಲು ರೂಪಿಸಿರುವ ಯೋಜನೆಗಳು ಯಾವುವು: ಈ ಯೋಜನೆಗಳ ಧ್ಯೇಯೋದ್ದೇಶ ಮತ್ತು ರೂಪುರೇಷೆಗಳು ಯಾವುವು: (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸಲು ಕೇಂದ್ರದಿಂದ ಮಂಜೂರಾತಿ ನೀಡಿರುವ ಯೋಜನೆಗಳ ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.<br><br>ಅಲ್ಲದೆ, ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸಲು ರಾಜ್ಯ ಸರ್ಕಾರದಿಂದ ಈ ಕೆಳಕಂಡ ಕ್ರಮಗಳನ್ನು ಪ್ರವಾಸೋದ್ಯಮ ಇಲಾಖೆಯಿಂದ ವಹಿಸಲಾಗುತ್ತದೆ:<br><br>1. ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೂಡಿಕೆ ಮಾಡಲು ಮುಂದೆ ಬರುವ ಹೂಡಿಕೆದಾರರಿಗೆ ಸಹಾಯಧನ, ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ಒದಗಿಸಲು ಕರ್ನಾಟಕ ಪ್ರವಾಸೋದ್ಯಮ ನೀತಿ – 2020-26 ಅನ್ನು ಜಾರಿಗೆ ತರಲಾಗಿದೆ.<br>2. ಪ್ರವಾಸಿ ತಾಣಗಳಲ್ಲಿ ಅಗತ್ಯವಾಗಿರುವ ಪ್ರವಾಸಿ ಸೌಲಭ್ಯಗಳಾದ ವಸತಿ ಕಟ್ಟಡಗಳು, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯಗಳು, ಸ್ನಾನಗೃಹಗಳು, ಪಾರ್ಕಿಂಗ್ ವ್ಯವಸ್ಥೆ, ಪ್ರವಾಸಿ ಸೂಚನಾ ಫಲಕಗಳು, ಆಸನಗಳ ವ್ಯವಸ್ಥೆ, ಮೆಟ್ಟಿಲುಗಳು ಮತ್ತು ರೈಲಿಂಗ್ಸ್, ಪರಗೋಲ, ಪಾತ್ ವೇ, ಪ್ರವಾಸಿ ತಾಣಗಳಲ್ಲಿ ಅಂತಿಮ ಹಂತದ ಕೂಡು ರಸ್ತೆ ಅಭಿವೃದ್ಧಿ, ಮುಂತಾದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.<br>3. ಪ್ರವಾಸಿ ತಾಣಗಳ ಬಳಿ ಪ್ರವಾಸಿಗರಿಗೆ ಆತಿಥ್ಯ ಸೇವೆಯನ್ನು ಒದಗಿಸಲು ಮುಂದೆ ಬರುವ ಮನೆ ಮಾಲೀಕರುಗಳಿಗೆ "ಹೋಂ ಸ್ಟೇ" ಯೋಜನೆಯಡಿ ನೋಂದಣಿ ಮಾಡಲಾಗುವುದು.<br>4. ಪ್ರವಾಸಿಗರಿಗೆ ಪ್ರವಾಸಿ ತಾಣಗಳ ಬಗ್ಗೆ ಮಾಹಿತಿಯನ್ನು ಒದಗಿಸಲು ಇಲಾಖೆಯಿಂದ ತರಬೇತಿ ನೀಡಿರುವ ಪ್ರವಾಸಿ ಮಾರ್ಗದರ್ಶಿಗಳ ನೋಂದಣಿ ಮಾಡಿ ಪರವಾನಗಿ ನೀಡಲಾಗುವುದು.<br>5. ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಪ್ರವಾಸಿ ತಾಣಗಳಲ್ಲಿ ಗೃಹ ರಕ್ಷಕ ದಳದ ಸಿಬ್ಬಂದಿಗಳಿಗೆ ತರಬೇತಿ ನೀಡಿ, "ಪ್ರವಾಸಿ ಮಿತ್ರ"ಗಳನ್ನಾಗಿ ಪ್ರವಾಸಿ ತಾಣಗಳಿಗೆ ನೇಮಿಸಲಾಗಿದೆ.<br>6. ರಾಜ್ಯದ ಪ್ರವಾಸಿ ತಾಣಗಳನ್ನು ಪ್ರಚಾರಪಡಿಸಲು ರಾಷ್ಟ್ರ ಮಟ್ಟದಲ್ಲಿ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಮೇಳ ಹಾಗೂ ರೋಡ್ ಶೋ ಗಳಲ್ಲಿ ಭಾಗವಹಿಸುವುದು.<br>7. ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ಪ್ರಮುಖ ಪ್ರವಾಸಿ ತಾಣಗಳಲ್ಲಿ ನಡೆಯುವ ಹಬ್ಬ ಹಾಗೂ ಉತ್ಸವಗಳಿಗೆ ಇಲಾಖೆಯ ಅನುದಾನ ಒದಗಿಸುವುದು ಹಾಗೂ ಸದರಿ ಹಬ್ಬ ಹಾಗೂ ಉತ್ಸವಗಳಲ್ಲಿ ಇಲಾಖೆಯ ಪರವಾಗಿ ಮಳಿಗೆ ತೆರೆದು ರಾಜ್ಯದ ಪ್ರವಾಸಿ ತಾಣಗಳನ್ನು ವ್ಯಾಪಕವಾಗಿ ಪ್ರಚಾರ ಮಾಡಲಾಗುವುದು.<br>8. ರಾಜ್ಯದ ಪ್ರವಾಸಿ ತಾಣಗಳ ಪ್ರಚಾರಕ್ಕಾಗಿ ರಾಜ್ಯ ಮಟ್ಟದ ಹಾಗೂ ರಾಷ್ಟ್ರ ಮಟ್ಟದ ಪತ್ರಿಕೆಗಳು ಹಾಗೂ ಮ್ಯಾಗಜೀನ್‌ಗಳಲ್ಲಿ ಪ್ರಚಾರ ನೀಡುವುದು.<br>9. ರಾಜ್ಯ ಪ್ರವಾಸಿ ತಾಣಗಳ ಬಗ್ಗೆ ಒಳಾಂಗಣ ಹಾಗೂ ಹೊರಾಂಗಣ ಪ್ರಚಾರವನ್ನು ವಿಮಾನ ನಿಲ್ದಾಣ, ಬಸ್ ನಿಲ್ದಾಣ, ರೈಲು ನಿಲ್ದಾಣ ಹಾಗೂ ಇತರೆ ಆಯ್ದ ಸ್ಥಳಗಳಲ್ಲಿ ಕೈಗೊಳ್ಳುವುದು. |

| | | |
|---|---|---|
| ಇ) | ರಾಜ್ಯ ಸರ್ಕಾರ ರಾಜ್ಯದ ಉದ್ಘೋಷಿತ ಬಿರುದು 'ಒಂದು ರಾಜ್ಯ-ಹಲವು ಜಗತ್ತು' ಎಂಬುದಾಗಿದ್ದು, ಈ ದೆಶೆಯಲ್ಲಿ ದೇಶ ಮತ್ತು ಜಗತ್ತಿನಾದ್ಯಂತ ಪ್ರವಾಸೋದ್ಯಮ ಪ್ರಚಾರಕ್ಕೆ ಕೈಗೊಂಡಿರುವ ಕಾರ್ಯಕ್ರಮ ಮತ್ತು ಯೋಜನೆಗಳ ಯಾವುವು; (ಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ಪ್ರವಾಸೋದ್ಯಮವನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಪಡಿಸಿ, 'ಒಂದು ರಾಜ್ಯ-ಹಲವು ಜಗತ್ತು' ಎಂಬ ಘೋಷವಾಕ್ಯದೊಂದಿಗೆ ರಾಜ್ಯ ಪ್ರವಾಸೋದ್ಯಮವನ್ನು ಉತ್ತೇಜಿಸಲು ಹಾಗೂ ರಾಜ್ಯದತ್ತ ಪ್ರವಾಸಿಗರನ್ನು ಆಕರ್ಷಿಸಲು 'ಸ್ಕ್ರಿಪ್ಟ್ ಯುವರ್ ಅಡ್ವೆಂಚರ್' ಥೀಮ್ ಅಡಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಪ್ರತಿ ವರ್ಷವೂ ವಿಶ್ವದಾದ್ಯಂತ ಪ್ರಮುಖ ನಗರಗಳಲ್ಲಿ ನಡೆಯುವ ಅಂತರಾಷ್ಟ್ರೀಯ ಪ್ರವಾಸಿ ಮೇಳಗಳಲ್ಲಿ ಅಂದರೆ, Arabian Travel Market-Dubai, World Travel Market-London, IFTM Top Resa-France, PATA Travel Mart, FITUR-Spain ಹಾಗೂ ITB-Berlin, MITT Moscow-Russia, WTM-Africa ಅಂತರಾಷ್ಟ್ರೀಯ ಮೇಳಗಳಲ್ಲಿ ಹಾಗೂ ದೇಶದ ಪ್ರಮುಖ ನಗರಗಳಲ್ಲಿ ನಡೆಯುವ TTF, IITM ಮತ್ತು OTM ಸೇರಿದಂತೆ ಇನ್ನಿತರ ರಾಜ್ಯ ಸರ್ಕಾರಗಳು ಮತ್ತು ವಿವಿಧ ಖಾಸಗಿ ಸಂಸ್ಥೆಗಳು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಆಯೋಜಿಸುವ ವಿವಿಧ Conference, ಸಮಾವೇಶಗಳಲ್ಲಿ ಮತ್ತು ಎಲ್ಲಾ ಪ್ರಮುಖ Tourism Trade Fair ಗಳಲ್ಲಿ ಇಲಾಖೆಯು ಸಕ್ರಿಯವಾಗಿ ಪ್ರಚಾರದೊಂದಿಗೆ ಭಾಗವಹಿಸಿ, ಇಲಾಖೆಯು ರಾಜ್ಯವನ್ನು ಪ್ರತಿನಿಧಿಸಿ, ನಾಡಿನ ಕಲೆ, ಸಂಸ್ಕೃತಿ, ಪರಂಪರೆ, ಇತಿಹಾಸ ಮತ್ತು ವಾಸ್ತುಶಿಲ್ಪವನ್ನು ಪರಿಚಯಿಸಲು ಅತ್ಯಾಕರ್ಷಕ ಪರಿಕಲ್ಪನೆ ಮತು ವಿನ್ಯಾಸಗಳಲ್ಲಿ ಮಳಿಗೆಗಳನ್ನು ಸಜ್ಜುಗೊಳಿಸಿ, ಪ್ರಚಾರದೊಂದಿಗೆ ಯಶಸ್ವಿಯಾಗಿ ಭಾಗವಹಿಸಲಾಗುತ್ತಿರುತ್ತದೆ.<br><br>ಇದಲ್ಲದೆ, ಇಲಾಖೆಯು ಭಾಗವಹಿಸುವ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮೇಳಗಳ ಸಂದರ್ಭದಲ್ಲಿ ಇಲಾಖಾ ವತಿಯಿಂದ ಪ್ರಮುಖ ನಗರಗಳಲ್ಲಿ ರಾಜ್ಯ ಪ್ರವಾಸೋದ್ಯಮ ಕ್ಷೇತ್ರದಲ್ಲಿ ತೊಡಗಿರುವ ಪ್ರವಾಸಿ ಸಹಭಾಗಿದಾರರೊಂದಿಗೆ B2B ಸಭೆಗಳನ್ನು ನಡೆಸುವುದರ ಮೂಲಕ ರೋಡ್-ಷೋಗಳನ್ನು ಆಯೋಜಿಸಲಾಗುತ್ತದೆ.<br><br>ಮುಂದುವರೆದು, ರಾಜ್ಯದಲ್ಲಿನ ಎಲ್ಲಾ ಪ್ರಮುಖ ಜಿಲ್ಲೆಗಳಲ್ಲಿ ಆಯಾ ಜಿಲ್ಲಾಡಳಿತ ಹಾಗೂ ವಿವಿಧ ಸ್ಥಳೀಯ ಸಂಘ ಸಂಸ್ಥೆಗಳು ಸ್ಥಳೀಯ ಪ್ರವಾಸೋದ್ಯಮ, ಸಾಹಸ ಪ್ರವಾಸೋದ್ಯಮ ಸೇರಿದಂತೆ ಸಾಂಸ್ಕೃತಿಕ ಪ್ರವಾಸೋದ್ಯಮವನ್ನು ಉತ್ತೇಜಿಸುವ ಸಲುವಾಗಿ ಆಯೋಜಿಸಲ್ಪಡುವ ಪ್ರಮುಖ ಜಿಲ್ಲಾ ಉತ್ಸವಗಳು ಹಾಗೂ ಸಾಂಸ್ಕೃತಿಕ/ಪ್ರವಾಸಿ ಕಾರ್ಯಕ್ರಮಗಳಿಗೆ ಇಲಾಖಾ ವತಿಯಿಂದ ಅನುದಾನ/ ಪ್ರಾಯೋಜಕತ್ವ ಬಿಡುಗಡೆ ಮಾಡುವ ಮೂಲಕ ಪ್ರವಾಸಿ ಚಟುವಟಿಕೆಗಳಿಗೆ ಉತ್ತೇಜನ ನೀಡಲಾಗುತ್ತಿರುತ್ತದೆ ಹಾಗೂ ರಾಜ್ಯದಲ್ಲಿನ ಎಲ್ಲಾ ಪ್ರವಾಸಿ ತಾಣಗಳನ್ನು ಉತ್ತೇಜಿಸಲು ಆಕರ್ಷಕ ವೀಡಿಯೋ/ಛಾಯಾಚಿತ್ರಗಳನ್ನೊಳಗೊಂಡ ಅತ್ಯಾಕರ್ಷಕ ಪೋಸ್ಟ್‌ಗಳನ್ನು ಸಿದ್ಧಪಡಿಸಿ, ಇಲಾಖೆಯ ಅಧಿಕೃತ ಸಾಮಾಜಿಕ ಜಾಲತಾಣ (Social Media Handles) ಗಳಲ್ಲಿ ಪ್ರತಿ ನಿತ್ಯ ಆಕರ್ಷಕ ಪೋಸ್ಟ್‌ಗಳನ್ನು ಹಾಕುವ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ರಾಜ್ಯದತ್ತ ಆಕರ್ಷಿಸಲು ವ್ಯಾಪಕ ಪ್ರಚಾರ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ. |

| | | |
|---|---|---|
| ಈ) | ರಾಜ್ಯದಲ್ಲಿ ಪ್ರವಾಸೋದ್ಯಮ ಪ್ರೋತ್ಸಾಹಿಸಲು ಕೇಂದ್ರ ಸರ್ಕಾರದಿಂದ ವಿವಿಧ ಯೋಜನೆಗಳಿಂದ ರಾಜ್ಯಕ್ಕೆ ದೊರೆತಿರುವ ಆರ್ಥಿಕ ನೆರವು ಎಷ್ಟು; ಈ ನೆರವನ್ನು ಬಳಸಿರುವ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡುವುದು? | ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ "ಪ್ರಸಾದ್" ಯೋಜನೆಯಡಿ ಮೈಸೂರಿನ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಕಾಮಗಾರಿಯನ್ನು ರೂ.45.70 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಅನುಮೋದನೆ ನೀಡಲಾಗಿರುತ್ತದೆ. ಸದರಿ ಯೋಜನೆಗೆ ಕೇಂದ್ರದಿಂದ ಅನುದಾನ ಬಿಡುಗಡೆಯಾಗಬೇಕಿರುತ್ತದೆ. |

ಸಂಖ್ಯೆ: ಟಿಒಆರ್ 45 ಟಿಡಿವಿ 2024

(ಎಚ್.ಕೆ.ಪಾಟೀಲ)
ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು